ಬೆಂಗಳೂರು ಟರ್ಫ್ ಕ್ಲಬ್ ಕುರಿತು

5115 - ಶ್ರೀ ಎನ್.ಹೆಚ್. ಶಿವಶಂಕರ್ ರೆಡ್ಡಿ (ಗೌರಿಬಿದನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಟರ್ಫ್ ಕ್ಲಬ್‌ನ ಕಾರ್ಯದರ್ಶಿ ಹಾಗೂ ಸಿಬ್ಬಂದಿಗಳ ಕೈವಾಡದಿಂದಾಗಿ ಆಂಟಿಪೋಸ್ಟ್ ಬೆಟ್ಟಿಂಗ್ ವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಅವ್ಯವಹಾರದಿಂದಾಗಿ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಬರುತ್ತಿರುವ ಹಣ ಕಡಿತ ಗೊಳ್ಳುವುದಿಲ್ಲವೆ?

ಇ) ಬೆಂಗಳೂರು ಟರ್ಫ್ ಕ್ಲಬನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ? ಹಾಗಿದ್ದಲ್ಲಿ ನಗರದ ಹೊರವಲಯಕ್ಕೆ ಸ್ಥಳಾಂತರಿಸಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಈ ಸ್ಥಳವನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಿಲ್ಲವೇ?

ಈ) ಬೆಂಗಳೂರು ಟರ್ಫ್ ಕ್ಲಬ್‌ನ ಬುಕ್ ಮೇಕರ್‌ಗಳು ಕ್ಲಬ್ ಸಿಬ್ಬಂದಿಯ ಜೊತೆ ಷಾಮೀಲಾಗಿ ನಿಗದಿತ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಡಿಪಾಸಿಟ್ ಆಗಿ ಪಡೆದು ಶಾಟಿ (ಕಾನೂನು ಬಾಹಿರ ಬೆಟ್ಟಿಂಗ್) ವ್ಯವಹಾರಗಳಲ್ಲಿ ನಿರತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಪರಿಶೀಲನೆಯಲ್ಲಿದೆ.

ಈ) ಇಲ್ಲ.

ಗೌರಿಬಿದನೂರು ಮಂಚೇನಹಳ್ಳಿ ಮತ್ತು ಹೊಸೂರು ಕೇಂದ್ರಗಳಲ್ಲಿ 66 ಕೆ.ವಿ.ಎ. ವಿದ್ಯುತ್ ಕಾಮಗಾರಿ

5116 - ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ಮಂಚೇನಹಳ್ಳಿ ಮತ್ತು ಹೊಸೂರು ಕೇಂದ್ರಗಳಲ್ಲಿ 66 ಕೆ.ವಿ. ವಿತರಣಾ ಕೇಂದ್ರಗಳ ಸ್ಥಾಪನೆಗಾಗಿ 1997-98ನೇ ಸಾಲಿನಲ್ಲಿ ಮಂಜೂರಾಗಿ ಅಡಿಗಲ್ಲು ಹಾಕಿದರೂ ಸಹ ಕಾಮಗಾರಿ ಆರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಹಾಗಿದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು?

ಇ) ವಿದುರಾಶ್ವತ್ಥ ಮತ್ತು ಡಿ.ಪಾಳ್ಯ ಕೇಂದ್ರಗಳಲ್ಲಿ 66 ಕೆ.ವಿ. ಕೇಂದ್ರಗಳ ಸ್ಥಾಪನೆಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ವೀರಕುಮಾರ ಆ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು. ಬಂದಿದೆ.

ಆ) ಗೌರಿಬಿದನೂರು ತಾಲ್ಲೂಕು ಮಂಚೇನಹಳ್ಳಿ ಹಾಗೂ ಹೊಸೂರುಗಳಲ್ಲಿ 66:11 ಕೆ.ವಿ. ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಈ ವಿದ್ಯುತ್ ಕೇಂದ್ರಗಳ ಸ್ಥಾಪನೆಗೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ನಿರ್ಮಾಣ ಕಾರ್ಯಗಳನ್ನು "ಟರ್ನ್ ಕೀ" ಆಧಾರದ ಮೇಲೆ ಟೆಂಡರ್‌ಗಳನ್ನು ಕರೆಯಲಾಗಿದ್ದು, ಇವುಗಳನ್ನು ಪರಿಶೀಲಿಸಲಾಗುತ್ತಿದೆ.

ಇ) ವಿದುರಾಶ್ವತ್ಥದಲ್ಲಿ 66:11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆಯ ಪ್ರಸ್ತಾವನೆಯನ್ನು ಅಂಗೀಕರಿಸಲಾಗಿದೆ.

ಈ) ಡಿ.ಪಾಳ್ಯದಲ್ಲಿ ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಯು ಸದ್ಯಕ್ಕೆ ಇರುವುದಿಲ್ಲ.

ನೇರ ನೇಮಕಾತಿ ನಿಷೇಧ ಆಡಳಿತ ಸುಧಾರಣೆ ಆಯೋಗ

5119 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 23.5.2000ದ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 32 ಸೇನಿಇ ರನ್ವಯ ಎಷ್ಟು ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ ಆಯ್ಕೆಗೆ ಸಂಬಂಧಪಟ್ಟಂತೆ ಆರ್ಥಿಕ ಮಿತವ್ಯಯವನ್ನು ಸಡಿಲಿಸಲಾಗಿದೆ?

ಆ) ಖಾಲಿ ಇರುವ ಹುದ್ದೆಗಳಲ್ಲಿ, ಎಷ್ಟು ಹುದ್ದೆಗಳನ್ನು ಆಯ್ಕೆ ಮಾಡಲು ಕರ್ನಾಟಕ ಲೋಕಸೇವಾ ಆಯೋಗ 1998ರಲ್ಲಿ ಬಿಡುಗಡೆ ಮಾಡಲಾಗಿದೆ?

ಇ) ಆಡಳಿತ ಸುಧಾರಣೆ, ಹುದ್ದೆಗಳ ಕಡಿತ ಇತ್ಯಾದಿ ಅಂಶಗಳ ಹಿನ್ನೆಲೆಯಲ್ಲಿ ವರದಿಸುವಂತೆ ರಚಿಸಲಾಗಿರುವ ಆಡಳಿತ ಸುಧಾರಣೆ ಆಯೋಗದ ಕಾರಣ ಹೇಳಿ, ಹೊರಡಿಸಲಾಗಿರುವ ನೇರ ನೇಮಕಾತಿ ನಿಷೇಧವನ್ನು ಆಯ್ಕೆ ಪ್ರಕ್ರಿಯೆ ಆರಂಭಗೊಂಡಿರುವ (ಅ ನಲ್ಲಿ ಪ್ರಸ್ತಾಪಿಸಿರುವ) ಹುದ್ದೆಗಳಿಗೆ ಅನ್ವಯಿಸುವುದರಿಂದ ಉಂಟಾಗಿರುವ ಸಮಸ್ಯೆಗೆ ಏನು ಪರಿಹಾರ ಕ್ರಮವಹಿಸಲಾಗಿದೆ?

ಈ) ಆಯೋಗದ ವರದಿಯನ್ನು ಆಧರಿಸಿ ಹುದ್ದೆಗಳ ಕಡಿತ ಕ್ರಮವನ್ನು ಅನುಸರಿಸುವುದಾದರೆ, ಖಾಲಿ ಇರುವ ಶೇ. 90ರಷ್ಟು ಹುದ್ದೆಗಳಿಂದ ಕಡಿತಗೊಳಿಸಬಹುದಲ್ಲವೇ, ಈ ಕ್ರಮವನ್ನು